# ವ್ಯಾಸ ಕುಂಡ

ವ್ಯಾಸ ಕುಂಡ ಬಿಯಾಸ್ ನದಿಯ ಉಗಮ ಸ್ಥಾನ. ಈ ಕುಂಡದಲ್ಲೇ ಮಹಾಭಾರತ ಗ್ರಂಥಕರ್ತೃ ವ್ಯಾಸ ಋಷಿಗಳು ನಿತ್ಯದ ಸ್ನಾನಾದಿ ಕಲಾಪಗಳನ್ನು ಮಾಡುತ್ತಿದ್ದರಂತೆ. ಬಿಯಾಸ್ ನದಿ ಹಿಮಾಚಲ ಪ್ರದೇಶದ ಕುಲು ಕಣಿವೆಯಲ್ಲಿ ಹುಟ್ಟಿ ಪಂಜಾಬ್‌ನಲ್ಲಿ ಹರಿದು ಮುಂದೆ ಸಟ್ಲೆಜ್ ನದಿಯನ್ನು ಸೇರುತ್ತದೆ. ಮನಾಲಿಯಿಂದ 22 ಕಿ.ಮೀ ದೂರಕ್ಕೆ ರೋತಾಂಗ್ ಪಾಸ್ ಮಾರ್ಗದಲ್ಲಿ ಕಂಡು ಬರುವ ಈ ಕುಂಡ ಸಮುದ್ರಮಟ್ಟದಿಂದ 3650 ಮೀಟರ್ ಎತ್ತರದಲ್ಲಿದೆ. ಈ ಕುಂಡವನ್ನು 'ಇಗ್ಲು' ಆಕಾರದಲ್ಲಿ ಸುತ್ತುವರಿದಂತೆ ಕಲ್ಲಿನಲ್ಲಿ ಕಟ್ಟಡ ಕಟ್ಟಿ ಸಂರಕ್ಷಿಸಲಾಗಿದೆ.

**-ಎಸ್.ಪ್ರಭಾವತಿ, ಬೆಂಗಳೂರು**





# ಮದುವೆಗೆ ಐರಣಿ

ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಜನ ತಮ್ಮ ಮದುವೆ ಸಂದರ್ಭದಲ್ಲಿ ಕುಂಬಾರರ ಮನೆಯಿಂದ ತಂದ ಐರಣಿಗಳನ್ನು ಬಳಸುತ್ತಾರೆ. ದೇವರ ಸಮಾನವೆಂದು ಅವುಗಳ ಎದುರು ದಂಪತಿಗಳನ್ನು ಕೂಡ್ರಿಸಿ ಮದುವೆ ಕಾರ್ಯವನ್ನು ನೆರವೇರಿಸುತ್ತಾರೆ. ಊರ ಕುಂಬಾರರಿಗೆ ಮೊದಲೇ ತಿಳಿಸಿ, ನಂತರ ಭಾಜಾ ಭಜಂತ್ರಿಯೊಂದಿಗೆ ಹಾಡನ್ನು ಹಾಡುತ್ತಾ ಮದುವೆ ಮನೆಗೆ ತರುತ್ತಾರೆ. ಆದರೆ ಈ ಸಂಪ್ರದಾಯ ಈಗ ನಿಧಾನವಾಗಿ ಅಲ್ಲಲ್ಲಿ ಕಣ್ಮರೆಯಾಗುತ್ತದೆ.

**- ಡಾ.ಮಲ್ಲಿಕಾರ್ಜುನ ಕುಂಬಾರ, ರಾಜೂರ**

# ಹತ್ತು ಕೈಗಳ ಉಗ್ರ ನರಸಿಂಹ

ಮೌಂಟ್ ಅಬುವಿನ ರಮಣೀಯ ಪ್ರದೇಶದಲ್ಲಿರುವ 'ದಿಲ್ವಾರಾ' ಮಂದಿರ ವಿಶ್ವವಿಖ್ಯಾತಿ ಪಡೆದಿದೆ. ಐದು ದೇವಾಲಯಗಳ ಜಿನ ಮಂದಿರದ ಸಮೂಹವಾಗಿರುವ ಅಲ್ಲಿ ನವರಂಗದ ಮೇಲ್ಛಾವಣಿಯ ಮೇಲೆ ಉಗ್ರ ನರಸಿಂಹ ದೇವರ ಅಪರೂಪದ ಶಿಲ್ಪವಿದೆ. ತನ್ನ ನಾಲ್ಕು ಕೈಗಳಿಂದ ಶಂಖ, ಚಕ್ರ, ಗಧೆ ಮತ್ತು ಆಯುಧವನ್ನು ಧರಿಸಿ ಎರಡು ಕೈಗಳಿಂದ ಹಿರಣ್ಯಕಶಿಪುವನ್ನು ಹಿಡಿದು ಮತ್ತೆರಡು ಕೈಗಳಿಂದ ಅಭಯ ಹಸ್ತವನ್ನು ತೋರುತ್ತಿರುವಂತಿದೆ. ಇನ್ನೆರಡು ಕೈಗಳನ್ನು ತನ್ನ ತಲೆಯ ಮೇಲಿಟ್ಟು ಹತ್ತನೆಯ ಕೈಯಿಂದ ಹಿರಣ್ಯ ಕಶಿಪುವಿನ ಕರುಳು ಬಗೆಯುತ್ತಿರುವ ಉಗ್ರ ನರಸಿಂಹಾವತಾರದ ಶಿಲ್ಪವನ್ನು ಬಹಳ ನಾಜೂಕಿನಿಂದ ಕೆತ್ತಲಾಗಿದೆ.

**-ಎಸ್. ವಿಜಯ ಗುರುರಾಜ, ಬೆಂಗಳೂರು**

